ಒಂದಾಣೆ ಮಾಲೆ. 178

ದೀಪಾವಳಿ

(ಏಕಾಂಕ ನಾಟಕ)



ರಚಯಿತ:


ದಿ| ಕುಡ್ವಿ ಚಂದ್ರಕಾಂತ ಶೆಣೈ,

ಮಂಗಳೂರು.

1958 ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

ಸಮರ್ಪಣೆ.



ಕುಡ್ವಿ ಚಂದ್ರಕಾಂತ ಶೆಣೈ.

ಜನನ: 25–11–1940 ಮರಣ:: 10–1–1958

ಅವನೇ ಬರೆದ

'ದೀಪಾವಳಿ'

ಅವನಿಗೆ

ಸಮರ್ಪಿತ.

ಮುನ್ನುಡಿ.

ಇಂದಿಗೆ ಎರಡು ತಿಂಗಳ ಕೆಳಗೆ (ತಾ. 10-1-1958) ನನ್ನ ಹಿರಿಯ ಪುತ್ರ ಚಂದ್ರಕಾಂತನು ಇಹವನ್ನು ತ್ಯಜಿಸಿದನು. ಅವನ ಆಕಾಂಕ್ಷೆಗಳೇನಿದ್ದುವು, ಬದುಕಿದ್ದರೆ ಅವನ ಭವಿಷ್ಯವೇಂತಿರುತಿತ್ತು — ಅದಾವುದನ್ನೂ ನಾವಾರೂ ಅಳೆದಿಲ್ಲ, ಊಹನೆಗೂ ನಿಲುಕದು. ಚಿಕ್ಕಂದಿನಿಂದಲೂ ಅವನಲ್ಲಿ, ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯದ ವಿಷಯವಾಗಿ ವಿಶೇಷ ಆಸಕ್ತಿಯಿತ್ತು. ಯಾರಿಂದಲೂ ಪ್ರೇರೇಪಿಸಲ್ಪಡದೆ ಅಥವಾ ಒತ್ತಾಯಿಸಲ್ಪಡದೆ, ತನ್ನಲ್ಲಿ ಸ್ವಾಭಾವಿಕವಾಗಿದ್ದ ಸಾಹಿತ್ಯಪ್ರೇಮದಿಂದಲೇ ಅವನು ತನ್ನ ಏಳನೆಯ ವಯಸ್ಸಿನಿಂದಲೂ ಕನ್ನಡ ಪತ್ರಿಕೆಗಳ ವಾಚನವನ್ನಾರಂಭಿಸಿದ್ದನು. ನಾಟಕ ಕಲೆಯ ವಿಷಯದಲ್ಲಿಯೂ ಉತ್ಸಾಹ ತೋರಿಸುತಿದ್ದನು. ನಾನು ಎಲ್ಲಿಯಾದರೂ ಕೈಕೊಂಡ ನಾಟಕ ದಿಗ್ದರ್ಶನದ ವೇಳೆಯಲ್ಲಿ, ಕೆಲವೊಮ್ಮೆ, ನಾನು ಇಚ್ಛಿಸದಿದ್ದರೂ ನನ್ನೊಂದಿಗೆ ಬಂದು, ರಾತ್ರೆ ತನಕ ಮೌನವಾಗಿ ಕುಳಿತು, ನಾಟಕಾಭ್ಯಾಸವನ್ನು ನೋಡುವ ಆಸಕ್ತಿಯು ಅವನಲ್ಲಿತ್ತು. ಇಂದಿಗೆ ಸುಮಾರು ಎರಡೂವರೆ ವರ್ಷಗಳ ಹಿಂದೆ, ಅಂದರೆ ಅವನ ಹದಿನೈದನೇ ವಯಸ್ಸಿನಲ್ಲಿ, ದೀಪಾವಳಿಹಬ್ಬಕ್ಕೆ ಹತ್ತುದಿನಗಳಿರುವಾಗ, "ದೀಪಾವಳಿ" ಎಂಬ ಒಂದು ಏಕಾಂಕ ನಾಟಕವನ್ನು ಬರೆದು,—ನನಗೆ ಬೇರೆ ಕಡೆಗಳಿಂದ ಬಂದಿದ್ದ ಇತರ ಲೇಖನಗಳೊಂದಿಗೆ ನನ್ನ ಮೇಜಿನ ಮೇಲಿರಿಸಿದ್ದನ್ನು ನಾನು ತೆರೆದು ನೋಡಿದಾಗ,—ನೇರಾಗಿ ನನ್ನ ಕೈಗೆ ಒಪ್ಪಿಸದೆ ಆ ರೀತಿಯಲ್ಲಿ ನನ್ನ ಲಕ್ಷ್ಯಕ್ಕೆ ಬರುವಂತೆ ವರ್ತಿಸಿದ ಅವನಾ ಲಜ್ಜಾಸ್ವಭಾವಕ್ಕೆ ವಿನೋದಗೊಂಡು, ಕುತೂಹಲದಿಂದ ಓದಿ, ಅವನನ್ನು ಕರೆದು ಒಂದೆರಡು ಚಿಕ್ಕ ತಿದ್ದುಪಡಿಗಳನ್ನು ಸೂಚಿಸಿ, ಪುನಃ ಬರೆಸಿ, "ಪ್ರಭಾತ" ದೀಪಾವಳಿ ಸಂಚಿಕೆಯಲ್ಲಿ ಪ್ರಕಟಿಸಿದ್ದೆನು. (ಪ್ರಭಾತ, ದೀಪಾವಳಿ ಸಂಚಿಕೆ-ತಾ. 15-11-55). ಇದಾದ ಕೆಲತಿಂಗಳ ನಂತರ, 'ಪ್ರಭಾತ'ದ ಸಾಪ್ತಾಹಿಕ ಸಂಚಿಕೆಗಳಿಗೂ, ಅವನು ವಾರವಾರವೂ ಬರೆಯುತಿದ್ದನು. ಕೆಲವು ಚಲಚ್ಚಿತ್ರಗಳ ವಿಮರ್ಶೆಗಳನ್ನೂ ಬರೆದಿರುತ್ತಾನೆ.

ಹೈಸ್ಕೂಲಿನ ಶಿಕ್ಷಣ ಮುಗಿಸಿ, ಕೊಲೇಜ್ ಶಿಕ್ಷಣ ಆರಂಭಿಸಿದ ಮೇಲೂ ಚಂದ್ರಕಾಂತನು, 'ಒಂದಾಣೆ ಮಾಲೆ'ಯ ಪ್ರಕಟಣೆಗಳಿಗೂ ಸ್ವೇಚ್ಛೆಯಿಂದಲೇ, ಪ್ರೂಫ್ ತಿದ್ದುವುದೇ ಮೊದಲಾದ ಸೇವೆಗಳನ್ನು ಸಲ್ಲಿಸುತಿದ್ದನು.

ಆದರೆ, ಮಾಲೆಗೆ ಅವನ ಬರೆಹಗಳನ್ನು ನಾನು ಕೇಳಲೂ ಇಲ್ಲ, ಅವನಾಗಿ ಒಪ್ಪಿಸಲೂ ಇಲ್ಲ. ತನ್ನ ಬರೆಹವು ಅಚ್ಚಿನಲ್ಲಿ ಬರಲೇಬೇಕೆಂದು ಅವನು ಇಚ್ಛಿಸಿರಲಿಲ್ಲ. 'ದೀಪಾವಳಿ' ನಾಟಕಕ್ಕಾದರೂ ಅವನು ತನ್ನ ಹೆಸರನ್ನು ಹಾಕಿರಲಿಲ್ಲ; ನಾನೇ ಅಚ್ಚಿನಲ್ಲಿ ಅದನ್ನು ಹಾಕಿಸಿದ್ದೆ. (ಇಲ್ಲಿ ಒಂದು ವಿಷಯವನ್ನು ಉಲ್ಲೇಖಿಸಲಿಚ್ಛಿಸುತ್ತೇನೆ: ಅವನಿಗೆ ಆರನೇ ಫೋರ್ಮಿನಲ್ಲಿ ಕನ್ನಡದಂತೆ ಇಂಗ್ಲಿಷ್ ಪಾಠದಲ್ಲೂ ಇಂಗ್ಲಿಷ್ ಪ್ರಬಂಧದಲ್ಲೂ ಪ್ರಥಮ ಬಹುಮಾನ ದೊರೆತಿತ್ತು. ಶಾಲಾ ಪತ್ರಿಕೆಯು, ಆರನೇ ಫೊರ್ಮಿನ ವಿದ್ಯಾರ್ಥಿಗಳ ಪ್ರಥಮ ಬಹುಮಾನ ದೊರೆತ ಪ್ರಬಂಧವನ್ನು ಪ್ರಕಟಿಸುವ ಪದ್ಧತಿಯಂತೆ ಆ ವರ್ಷ ಪ್ರಕಟಿಸುವಾಗ 'ಪ್ರಥಮ ಬಹುಮಾನ ದೊರೆತ ಇಂಗ್ಲಿಷ್ ಪ್ರಬಂಧ'ವೆಂಬ ಶಿರೋನಾಮೆಯಿಂದ, ತಪ್ಪಾಗಿ, ಇನ್ನೋರ್ವ ವಿದ್ಯಾರ್ಥಿಯ ಪ್ರಥಮ ಬಹುಮಾನ ದೊರೆತಿರದ ಪ್ರಬಂಧವನ್ನು ಆ ವಿದ್ಯಾರ್ಥಿಯ ಹೆಸರಿನಲ್ಲಿ ಪ್ರಕಟಿಸಿತು. ಶಾಲಾ ಪತ್ರಿಕೆಯವರಿಗೆ ಆ ತಪ್ಪನ್ನು ತಿದ್ದುವಂತೆ ತಿಳಿಸಬೇಕೆಂದು ಚಂದ್ರಕಾಂತನಿಗೆ ಸೂಚಿಸಿದಾಗ, "ಪ್ರಮಾದದಿಂದ ಹಾಗೆ ಮಾಡಿದ್ದಿರಬೇಕು, ಈ ಚಿಕ್ಕ ವಿಷಯಕ್ಕೆ ನಾನೇಕೆ ಮಹತ್ವ ಕೊಡಲಿ?" ಎಂದಿದ್ದನು. ಬಹುಮಾನವು ಚಂದ್ರಕಾಂತನಿಗೆ ಸಂದಿತ್ತು, ಶಾಲಾ ವರದಿಯಲ್ಲೂ ಅದೇ ರೀತಿ ಸರಿಯಾಗಿ ಪ್ರಕಟವಾಗಿತ್ತು. ಪತ್ರಿಕೆಯಲ್ಲಿ ಮಾತ್ರ ತಪ್ಪಾಗಿ, ಮತ್ತೊಂದು ಪ್ರಬಂಧವು 'ಪ್ರಥಮ'ವೆಂದು ಪ್ರಕಟವಾಗಿತ್ತು.)

ಚಂದ್ರಕಾಂತನ ಬೇಡಿಕೆಗಳು (demands) ಮತ್ತು ಅನುಪತ್ಯಗಳು (wants) ಬಲು ಕಡಿಮೆಯಿದ್ದುವು. ಅವನು ಅತ್ಯಲ್ಪವನ್ನು ತೆಗೆದುಕೊಂಡು ಅತಿಹೆಚ್ಚನ್ನು ಕೊಡುವ ಸ್ವಭಾವದವನಾಗಿದ್ದನು. ಕಷ್ಟಾನುಭವ ಮಾಡುವವರಿಗಾಗಿ ಅವನಲ್ಲಿ ಸದಾ ಸಹಾನುಭೂತಿ ಇತ್ತು.

ತಾನು ಕೀರ್ತಿಯನ್ನು ಬಯಸದೆ ಕರ್ತವ್ಯವಾಗಿಯೇ ಸೇವೆಯೊಪ್ಪಿಸಿ, ತೀರ ಆವಶ್ಯಕವಿರುವಷ್ಟು ಮತ್ತು ತೀರ ಸರಲವಾಗಿರುವ ಉಡುಪುಗಳಲ್ಲೇ ತೃಪ್ತಿಗೊಂಡಿದ್ದ ಆ ಕಿರಿಯ ಬಾಲಕನ ಹಿರಿಯ ಗುಣವನ್ನು ನೆನೆದು, ಅವನೇ ಒಮ್ಮೆ ನೇಯ್ದು ಇರಿಸಿದ ವಸ್ತ್ರವನ್ನೇ ಅವನಿಗೆ ಹೊದಿಸುವಂತೆ ಈ 'ದೀಪಾವಳಿ' ನಾಟಕವನ್ನು ಪ್ರಕಟಿಸುತಿದ್ದೇನೆ. ಇದುವೇ ಅವನ ಸ್ಮಾರಕ. ನನ್ನದೀ ಅಸಂಯಮನ ಅಥವಾ ಆಶಾಪೂರಣೆಯನ್ನು ವಾಚಕರು ಸೈರಿಸುವರೆಂದು ಆಶಿಸುವೆನು.

11—3—1958. ಕುಡ್ಪಿ ವಾಸುದೇವ ಶೆಣೈ.

ದೀಪಾವಳಿ

ಏಕಾಂಕ ನಾಟಕ

ಪಾತ್ರ ಪರಿಚಯ

ರಾಮರಾಯ— ಓರ್ವ ಶ್ರೀಮಂತ, ವಯಸ್ಸು ೫೦.
ಶೀನಪ್ಪ— ರಾಮರಾಯರ ಮನೆಯಾಳು, ಬಡವ, ವಯಸ್ಸು ೪೮.
ಗಣಪತಿ— ರಾಮರಾಯರ ಅಳಿಯ, ವಯಸ್ಸು ೩೦.
ಮಾಧು— ರಾಮರಾಯರ ಮಗ, ವಯಸ್ಸು ೧೦.
ಗುರುವ— ಶೀನಪ್ಪನ ಮಗ, ವಯಸ್ಸು ೧೦.
ಸೀತಾಬಾಯಿ— ರಾಮರಾಯರ ಪತ್ನಿ, ವಯಸ್ಸು ೪೦.
ಲಕ್ಷ್ಮಿ— ಶೀನಪ್ಪನ ಪತ್ನಿ, ವಯಸ್ಸು ೩೮.
ಕುಸುಮ— ರಾಮರಾಯರ ಮಗಳು, ವಯಸ್ಸು ೨೨.
(ಇನ್ನು ಅಂಚೆಜವಾನ, ಪೋಲೀಸ್ ಇನ್ಸ್‌ಪೆಕ್ಟರ್ ಇತ್ಯಾದಿ.)

ದೃಶ್ಯ ೧

(ರಾಮರಾಯರ ಮನೆಯ ಹಜಾರ. ರಾಮರಾಯರು ಸೋಫಾದಲ್ಲಿ ಕುಳಿತು ಪತ್ರಿಕೆ ಓದುತ್ತಿದ್ದಾರೆ. ಅಷ್ಟರಲ್ಲಿ ಅಂಚೆ ಜವಾನ ಬಂದು ಒಂದು ಪತ್ರ ಕೊಟ್ಟು ಹೋಗುವನು.)

ರಾಮರಾಯ: (ಪತ್ರವನ್ನೋದುತ್ತ, ಸ್ವಗತಃ) ಎಂತಹ ಸಂತೋಷದ ಸುದ್ದಿ! ಗಣಪತಿ, ದೀಪಾವಳಿಗೆ ಕುಸುಮಳೊಡನೆ ಬರುವೆನೆಂದು ಪತ್ರ ಬರೆದಿದ್ದಾನೆ. ಆಗಲಿ. ಇವಳು ಎಷ್ಟೋ ಸಮಯದಿಂದ ಮಗಳ ಮುಖ ನೋಡಲು ಹಂಬಲಿಸುತ್ತಿದ್ದಳು. ಈಗಲಾದರೂ ಸಂದರ್ಭವೊದಗಿತಲ್ಲ. (ಒಳಗಿರುವ ಹೆಂಡತಿಯನ್ನುದ್ದೇಶಿಸಿ,) ಸೀತಾ, ಎಲ್ಲಿದ್ದಿಯೋ ನೀನು? ಇಲ್ಲಿ ಬಾ! ನಿನ್ನ ಅಳಿಯನಿಂದ ಪತ್ರ ಬಂದಿದೆ.

ಸೀತಾಬಾಯಿ: (ಬರುತ್ತ) ಹೌದೇ? ಎಲ್ಲಿ? ನೋಡೋಣ! ಏನು ಬರೆದಿದ್ದಾನೆ? ದೀಪಾವಳಿಗೆ ಬರುವ ಸುದ್ದಿಯಿದೆಯೇನು?

ರಾಮರಾಯ: ಅದಲ್ಲದೇ ಮತ್ತೇನು? ದೀಪಾವಳಿಗೆ ಕುಸುಮಳೊಡ
ಬರುವನಂತೆ. ರಜೆ ಸಿಗುವುದು ಕಷ್ಟವಾದರೂ ಹೇಗಾದರೂ ಮಾ
ದೊರಕಿಸಿಕೊಳ್ಳುವನಂತೆ.

ಸೀತಾಬಾಯಿ: ಈ ದೀಪಾವಳಿಗಾದರೂ ಮಗಳ ಮುಖ ನೋಡ
ವಂತಾಯಿತಲ್ಲ! ಹೇಗಿದ್ದಾಳೆಯೋ ನನ್ನ ಮುದ್ದು ಕಂದಮ್ಮ?

ರಾಮರಾಯ: ಸಾಕೇ, ಬಿಡು ನಿನ್ನ ಮಗಳ ಚಿಂತೆ! ಅವಳಿಗೇನ
ಗಿದೆ? ರತ್ನದಂತಹ ಗಂಡ ಸಿಕ್ಕಿದ್ದಾನೆ. ತಿಂದು ಸುಖಪಡಲಿಕ್ಕೇನು
ಕೊರತೆಯಿಲ್ಲ. ಮತ್ತೇನು ಬೇಕು?

ಸೀತಾಬಾಯಿ: ಹೊತ್ತು ಹೆತ್ತವಳು ನಾನು. ನಿಮಗೇನು ಗೊತ್ತ
ಕರುಳಿನ ಮಮತೆ? ಮದುವೆಯಾಗಿ ಎರಡು ವರ್ಷಗಳಾದುವು! ಆ ಎರಡ
ವರ್ಷಗಳಲ್ಲಿ ಒಮ್ಮೆಯೂ ಅವಳ ಮುಖ ನೋಡಿಲ್ಲವೆಂದರೆ?

ರಾಮರಾಯ: ಮತ್ತೆ, ಮದುವೆ ಮಾಡಿಕೊಟ್ಟ ನಂತರ ಹಾಗೆ
ನೋಡು! ನಿನ್ನಂತೆ ತಿಂಗಳಿಗೊಮ್ಮೆ ತವರುಮನೆಗೆ ಹೋಗಲೆಂದರೆ, ಅವಳ
ಬಲು ದೂರದ ಊರಿನಲ್ಲಿರುವವಳು.

ಸೀತಾಬಾಯಿ: ಈ ವರ್ಗಾವರ್ಗಿ ಏಕೆ ಮಾಡುತ್ತಾರೋ—ನವ
ಜನ—ನಮ್ಮ ಭಾಷೆ ಇಲ್ಲದ ಕಡೆಗಳಿಗೆ ಏಕೆ ಕಳಿಸುತ್ತಾರೋ ನನ
ಅರ್ಥವಾಗುವುದಿಲ್ಲ. ಸರಕಾರಕ್ಕೆ ಮಕ್ಕಳ ಮಮತೆ ಏನು ಗೊತ್ತು?

ರಾಮರಾಯ: ಹಾಗೆನ್ನಬೇಡ, ಸರಕಾರಕ್ಕೆ ಎಲ್ಲ ಪ್ರಜೆಗಳೂ
ಮಕ್ಕಳೇ. ಸರಕಾರವು ಕಾರ್ಯನಿರ್ವಹಣದ ಅನುಕೂಲತೆಯನ್ನು ಎಲ್ಲರ
ಹಿತದೃಷ್ಟಿಯಿಂದ ನೋಡುತ್ತ—ಅದೊಂದು ಕಾರ್ಯನೀತಿಯಾಗಿ ವರ್ಗಾ
ವರ್ಗಿ ಮಾಡುವಾಗ—ನಮ್ಮ ಸೀತಾಬಾಯಿಯ ಅಳಿಯನ ಮೇಲೆ ವಿಶೇಷ
ರಿಯಾಯತಿ ತೋರಿಸಲು ಸಾಧ್ಯವಿಲ್ಲ ನೋಡು!

ಸೀತಾಬಾಯಿ: ಸರ್ಕಾರದಲ್ಲಿರುವವರು ಹೆಂಗುಸರಾದರೆ ಹಾಗಾಗ
ಲಿಕ್ಕಿಲ್ಲ.

ರಾಮರಾಯ: ಬಹುಶಃ ಅದಕ್ಕಾಗಿಯೇ ಹೆಚ್ಚು ಮಂದಿ ಹೆಂಗುಸರು
ಸರಕಾರದಲ್ಲಿ ಮೇಲಾಧಿಕಾರದಲ್ಲಿಲ್ಲ.

ಸೀತಾಬಾಯಿ: ನೋಡಿ, ನೀವು ಸುಮ್ಮಸುಮ್ಮಗೆ ಸ್ತ್ರೀ ಜಾತಿಯನ್ನು
ಕೆಣಕಬೇಡಿರಿ!

ರಾಮರಾಯ: ಏ ಹುಚ್ಚಿ! ಸ್ತ್ರೀ ಜಾತಿಯು ಮೂರ್ಖವೆನಿಸಿದರೂ ನಿರ್ವಾಹವಿಲ್ಲದೆ ಪುರುಷರು ಅಗ್ನಿಯಾಗಿರುವಾಗ, ಕೇಳಿಕೆದರೆ ಆದೀತೇ? ಕುಸುಮ ಮತ್ತು ನಿನ್ನ ಅಳಿಯರಾಯರು ಬರುವ ಸಂತೋಷದ ಸಮಯದಲ್ಲಿ ಸಿಡುಕೇ? ಕುಸುಮಾ, ಕುಸುಮಾ ಎಂದು ಆಗಾಗ್ಗೆ ಎನ್ನುತಿದ್ದೆ! ಈಗ ಅವಳೇ ಬರುತ್ತಾಳೆ. ಇನ್ನು ನಿನ್ನ ಚಿಂತೆ ಪರಿಹಾರವಾಯ್ತಲ್ಲ. ಹೋಗು, ನನಗೆ ಒಂದು ಕಪ್ ಚಹಾ ಮಾಡಿ ತಾ.

ಸೀತಾಬಾಯಿ: ನಿಮಗೆ ಚಹಾ ಮಾಡಿಕೊಟ್ಟೇ ನನಗೆ ಮುಪ್ಪು ಬಂತು.

ರಾಮರಾಯ: ಅರೇ, ಚಹಾ ಮಾಡದಿದ್ದರೂ ಮುಪ್ಪು ಬಂದೇ ಬರುತ್ತದೆ. ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರನಿಗೆ ಸೀತಾದೇವಿಯು ಒಂದೇ ಒಂದು ಕಪ್ ಚಹಾ ಮಾಡಿಕೊಟ್ಟ ದಾಖಲೆಯಿಲ್ಲ. ಆದರೂ........

ಸೀತಾಬಾಯಿ: ಆದರೇನೂ ಇಲ್ಲ— ಸೀತಾದೇವಿಗೆ ಮುಪ್ಪು ಬಂದಿತ್ತು ಎಂಬ ದಾಖಲೆ ಕೂಡ ರಾಮಾಯಣದಲ್ಲೆಲ್ಲೂ ತೋರುವುದಿಲ್ಲ.

ರಾಮರಾಯ: ನಿಜ. ಅಷ್ಟರೊಳಗೆ ಅವಳನ್ನು ಭೂಮಾತೆಯೇ ಎತ್ತಿ ಒಯ್ದುಬಿಟ್ಟಳು. ನಿನಗೆ ಅಂಥ ಅಪಾಯವೇನೂ ಇಲ್ಲ. ಬಿಡು ಆ ಯೋಚನೆ.

ಸೀತಾಬಾಯಿ: ಚಹಾಯುಗದಲ್ಲಿ ಭೂಮಾತೆಯ ಮೈಮೇಲೆಲ್ಲ ಚಹಾ ಸೊಪ್ಪು ಬೆಳೆಸಲಾರಂಭಿಸಿದರೆ ಅವಳೆದ್ದು ಬರುವುದಿದೆಯೇ? ಬಿಡಿ (ಇಬ್ಬರೂ ನಗುವರು.) ಪರದೆ.

ದೃಶ್ಯ ೨

(ಬೀದಿ. ಶೀನಪ್ಪನು ಆಲೋಚಿಸುತ್ತಾ ಬರುತ್ತಿರುವನು. ಆತನ ಕೈಯ್ಯಲ್ಲಿ ರಾಮರಾಯರ ಮನೆಗೆಂದು ಖರೀದಿಮಾಡಿದ ಕಾಯಿಪಲ್ಯಗಳು ತುಂಬಿದ ಚೀಲವಿದೆ.)

ಶೀನಪ್ಪ: (ಸ್ವಗತಃ) ಲೋಕವೇ ಕೆಟ್ಟಿದೆ! ಈ ಪ್ರಪಂಚದಲ್ಲಿ ಬಡವನಾದವನಿಗೆ ಸ್ಥಾನಮಾನಗಳೆಂಬುದಿಲ್ಲ. "ಕಾಲಾನುಕಾಲಕ್ಕೆ ಬಡವಂ ಬಲ್ಲಿದನಾಗನೇ?" ಎಂದು ಕವಿಯು ಹಾಡಿದ್ದಾನೆ. ನಿಜ. ಆದರೆ, ಅದು ಕೇವಲ ಅಪವಾದ. ಅಥವಾ ಒಬ್ಬ ಬಡವನು ಬಲ್ಲಿದನಾದೊಡನೆ ಹಲವರು ಬಡವರಾಗುತ್ತಾರೇನೋ! ಜನ್ಮವಿಡೀ ಅರೆಹೊಟ್ಟೆ— ಜನ್ಮವಿಡೀ ಯೋಚನೆ.

ಬಡವನಿಗಾಗಿ ಕರುಣೆಪಡುವವರೆಂಬವರಿಲ್ಲ. ಬಹುಶಃ ಪ್ರತಿಯೊಬ್ಬನೂ ತನ್ನ ತನ್ನ ಜೀವನ ಸಮಸ್ಯೆಯನ್ನೇ ಚಿಂತಿಸುತ್ತಿರುತ್ತಾನೆ. ಹೊಟ್ಟೆತುಂಬ ಉಂಡವನಿಗೆ ಉಣ್ಣಲು ಇಲ್ಲದವನ ಒಡಲಾಗ್ನಿಯು ಅರಿವಾಗದು. ತಿಂಗಳಿಗೆ ಸಿಗುವ ೨೫ ರೂಪಾಯಿಗಳಲ್ಲಿ ನಾನು ಹೇಗೆ ಸಂಸಾರ ಸಾಗಿಸಲಿ? ಹೇಗೆ ಮಾಡಿದರೂ ಒಪ್ಪೊತ್ತೂಟಕ್ಕೆ ಸಾಕಾಗದು. ಮನೆ ಬಾಡಿಗೆಗೇ ೧೨ ರೂಪಾಯಿ ಕೊಟ್ಟರೆ ಮತ್ತೆ ಉಳಿಯುವುದೇನು? ಹೆಂಡತಿ ಮಕ್ಕಳ ಹೊಟ್ಟೆಯುರಿ ಬೇರೆ! ಅವರ ಹಸಿದ ಮುಖಗಳನ್ನು ಸದಾ ನೋಡಿ ಸಹಿಸ ಬೇಕಲ್ಲ! ಆದರೆ ಎಲ್ಲಿಂದ ಹಣ ತರಲಿ? ಹಣ ಗಿಡಕ್ಕೆ ಹುಟ್ಟುವುದೇನು? ಇತ್ತ ದೀಪಾವಳಿಯೂ ಓಡೋಡಿ ಬಂದಿದೆ. ಮನೆಯಲ್ಲಿ ಅಕ್ಕಿ ಕಾಳು ಇಲ್ಲ. ಹಣವಿಲ್ಲದೆ ಕೊಡುವವರೂ ಇಲ್ಲ. ಈ ಸಂಸಾರವನ್ನು ಕಟ್ಟಿಕೊಂಡು ಹೇಗೆ ನಡೆಯುಲೆಂಬುದೇ ಯೋಚನೆ. ದೀಪಾವಳಿಯು ಮಾತಂತಿರಲಿ. ಇಂದಿನ ಗತಿಯೇನೂ ಅಂತ! ಬಡವರಿಗೆ ಸಾಲ ಕೊಡುವವರಿರುವರೇ? ದೇವರೇ ಇನ್ನು ನನಗೆ ಗತಿ. ಮತ್ತೇನು? (ಹೋಗುವನು.)

ಪರದೆ.

ದೃಶ್ಯ ೩

(ದೀಪಾವಳಿಯ ದಿನ ಬೆಳಗ್ಗಿನ ಸಮಯ. ಶೀನಪ್ಪನ ಮನೆಯ ಚಾವಡಿ. ಶೀನಪ್ಪನು ಯೋಚಿಸುತ್ತಾ ಕುಳಿತಿರುವನು.)

ಶೀನಪ್ಪ: (ಸ್ವಗತಃ) ನನ್ನೊಡನೆ ಒಂದೇ ಒಂದು ಚಿಕ್ಕಾಸಾದರೂ ಇಲ್ಲವಲ್ಲ. ಈ ದಿನ ದೀಪಾವಳಿ ಹಬ್ಬ. ಮನೆ ಮನೆಗಳಲ್ಲಿಯೂ ಅಪೂರ್ವ ಭಕ್ಷ್ಯಭೋಜ್ಯಗಳು ತಯಾರಾಗುತ್ತಿರುವಾಗ ನನ್ನ ಮನೆಯಲ್ಲಿ ಗಂಜಿಗೂ ಗತಿಯಿಲ್ಲದಾಯಿತೇ? ಹಾಯ್, ದುರ್ವಿಧಿಯೇ, ನಿನ್ನ ಎಲ್ಲಾ ಪರಾಕ್ರಮವನ್ನು ನನ್ನ ಮೇಲೆಯೇ ಪ್ರಯೋಗಿಸುತ್ತಿರುವೆಯಾ?

ಲಕ್ಷ್ಮಿ: (ಪ್ರವೇಶಿಸಿ) ನೀವು ಹೀಗೆ ಯೋಚಿಸುತ್ತಾ ಕುಳಿತರೆ ಫಲವೇನು? ಎಲ್ಲಿಯಾದರೂ ಹೋಗಿ ಸಾಲ ಸಿಗುವುದೇ ಎಂದು ನೋಡಿರಿ. ಸಿಕ್ಕರೆ ನಮ್ಮ ಪುಣ್ಯ. ಅಲ್ಲದೆ ಹೀಗೆ ವಿಧಿಯನ್ನು ದೂರುತ್ತಾ ದೀರ್ಘ ಯೋಚನೆಗಳಿಂದ ತಲೆ ಕೆಡಿಸಿಕೊಂಡರೆ ಹೊಟ್ಟೆ ತುಂಬುವುದೇ?

ಶೀನಪ್ಪ: ನಾನೇನು ಮಾಡಲಿ! ನಂಬಿ ಸಾಲ ಕೊಡುವವರು ಯಾರು ಲಕ್ಷ್ಮಿ? ನನಗೆ ಏನು ಮಾಡುವುದೆಂದೇ ತಿಳಿಯುಲೊಲ್ಲದು.

ಲಕ್ಷ್ಮಿ: ನಿಮ್ಮ ಯಜಮಾನ ರಾಮರಾಯರಲ್ಲಿಗೆ ಹೋಗಿ ಅವರೊಡನೆ ಕೇಳಿರಿ! ಕೊಟ್ಟಾರು.

ಶೀನಪ್ಪ: ಅವರನ್ನು ನೀನು ತಿಳಿದಿಲ್ಲ ಲಕ್ಷ್ಮಿ! ಹಣದ ಮಾತೆತ್ತಿದರೆ ಅವರ ಮುಖ ಬಾಡುತ್ತದೆ, ಇಲ್ಲವೇ ಮೋರೆಗಂಟು ಬೀಳುತ್ತದೆ. ಸಾಕ್ಷಾತ್ ಪ್ರಳಯ ರುದ್ರನ ಅವತಾರ ಅವರು.

ಲಕ್ಷ್ಮಿ: ಆದರೆ ಈ ದಿನ ಅವರ ಅಳಿಯ ಹಾಗೂ ಮಗಳು ಬರುವರಂತಲ್ಲ. ಆ ಸಂತೋಷದ ಭರದಲ್ಲಿ ಅವರು ಸಾಲಕೊಡಲು ಒಪ್ಪಲೂಬಹುದು.

ಶೀನಪ್ಪ: ಆಗಲಿ, ಮತ್ತೇನು ಮಾಡುವುದು? ಬೇರೆ ಉಪಾಯವೇ ತೋಚದಾದ ಕಾರಣ— ಅವರೊಡನೆ ಸ್ವಲ್ಪ ಸಾಲ ಕೇಳುವೆನು. ಕೊಟ್ಟರೆ ಪುಣ್ಯ!

ಲಕ್ಷ್ಮಿ: ತಡಮಾಡಬೇಡಿರಿ, ಈಗಲೇ ೧೦ ಗಂಟೆಯಾಯಿತು. ಬೇಗ ಹೋಗಿ ಬನ್ನಿ. ಸಾಲ ಸಿಕ್ಕಿದರೆ, ಬರುವಾಗ ಗುರುವನಿಗೆ ಸ್ವಲ್ಪ ತಿಂಡಿತನ್ನಿ. ಅಡಿಗೆ ಮಾಡಲು ಅಕ್ಕಿಯಲ್ಲದೆ ಸ್ವಲ್ಪ ಬೇಳೆ, ಹಿಟ್ಟು, ಬೆಲ್ಲ ಮೊದಲಾದುವನ್ನು ನೆನಪಿನಿಂದ ತನ್ನಿ.

ಶೀನಪ್ಪ: (ನಿಟ್ಟುಸಿರು ಬಿಟ್ಟು) ಆಯಿತು, ಬೇಗ ಹೋಗಿಬರುತ್ತೇನೆ.

(ಹೊರಡುವನು. ಪರದೆ.)

ದೃಶ್ಯ ೪

(ರಾಮರಾಯರ ಮನೆ. ದೀಪಾವಳಿಯ ಸಂಭ್ರಮ ಕಂಡುಬರುತ್ತಲಿದೆ. ಮನೆಯಿಡೀ ಶೃಂಗರಿಸಲ್ಪಟ್ಟಿದೆ. ರಾಮರಾಯರು ಅಳಿಯ ಮತ್ತು ಮಗಳನ್ನು ಸ್ವಾಗತಿಸಿ, ಮನೆಗೆ ಕರತರುವುದಕ್ಕೋಸ್ಕರ ನಿಲ್ದಾಣಕ್ಕೆ ಹೋಗಲು ತಯಾರಾಗುತ್ತಿದ್ದಾರೆ. ಅಷ್ಟರಲ್ಲಿ ಶೀನಪ್ಪ ಬರುವನು.)

ಶೀನಪ್ಪ: (ಮೆಲ್ಲನೆ, ಸಂಕೋಚದಿಂದ) ಸ್ವಾಮೀ!

ರಾಮರಾಯ: ಯಾರದು? ಏನು ಬೇಕು?

ಶೀನಪ್ಪ: ನಾನು ಸ್ವಾಮೀ, ಶೀನಪ್ಪ.

ರಾಮರಾಯ: ನೀನೇ? ಏಕೆ ಬಂದೆ?

ಶೀನಪ್ಪ: ಒಂದು ವಿಷಯ ಕೇಳೋಣ ಅಂತ........(ತಲೆತುರಿಸಿಕೊಳ್ಳುವನು.)

ರಾಮು: ಯಾವ ವಿಷಯ? ಎಲ್ಲವನ್ನೂ ಮತ್ತೆ ಹೇಳಬಹುದ ನನಗೀಗ ಸಮಯವಿಲ್ಲ. ಮತ್ತೆ ಬಾ.

ಶೀನಪ್ಪ: ದೀಪಾವಳಿ........ಅಂತ........ನನ್ನಾಕೆ........!

ರಾಮು: ನಿನ್ನ ಪುರಾಣವೆಲ್ಲ ಮತ್ತೆ! ನನಗೀಗ ಅದನ್ನು ಕೇಳಲ ಸಾಧ್ಯವಿಲ್ಲ. ನಿಲ್ದಾಣಕ್ಕೆ ಹೊರಡಲು ಬಹಳ ಹೊತ್ತಾಯಿತು.

ಶೀನಪ್ಪ: (ಖಿನ್ನನಾಗಿ) ಹಾಗಾದರೆ ನಾನು ಮತ್ತೆ ಬರುವೆನ (ಹೋಗುವನು.)

ರಾಮು: (ಒಳಗಿರುವ ಹೆಂಡತಿಯನ್ನುದ್ದೇಶಿಸಿ) ಸೀತಾ, ನಾನ ನಿಲ್ದಾಣಕ್ಕೆ ಹೋಗಿ ಅವರಿಬ್ಬರನ್ನು ಕರೆತರುತ್ತೇನೆ. ಮನೆಯ ಕ ನೋಡಿಕೋ!

ಸೀತಾಬಾಯಿ: (ಒಳಗಿನಿಂದ) ನೀವು ಹೋಗಿ. ಇನ್ನೂ ಎಷ ಹೊತ್ತು ವ್ಯರ್ಥವಾಗಿ ಕಳೆಯುತ್ತೀರಿ? ಇಷ್ಟರೊಳಗೆ ರೈಲು ನಿಲ್ದಾಣ ತ ಪಿರಬೇಕು. ಮನೆಯ ಕಡೆ ನೋಡಿಕೊಳ್ಳುವ ಜವಾಬ್ದಾರಿ ನನಗೆ.

ರಾಮು: ಆಯಿತು; ಇನ್ನೇನಿದೆ? ಹೋಗಿಬರುತ್ತೇನೆ.

(ಹೋಗುವನು. ಪರದೆ.)

ದೃಶ್ಯ ೫

(ರಾಮರಾಯರ ಮನೆ. ರಾಮರಾಯರು ಅಳಿಯ ಮತ್ತು ಮಗಳೊಡ ಬರುವರು.)

ರಾಮು: (ಗಟ್ಟಿಯಾಗಿ) ಸೀತಾ, ಇಲ್ಲಿ ನೋಡು, ಯಾರು ಬಂದಿದಾ ರೆಂಬುದನ್ನು. ಬೇಗ ಬಾ.

ಸೀತಾಬಾಯಿ: (ಓಡಿಬರುತ್ತ) ನನ್ನ ಮುದ್ದು ಬಂದಳೇ? ಅಯ್ಯೋ ನನ್ನ ಕಂದಾ! (ಮಗಳನ್ನು ಪ್ರೀತಿಯಿಂದ ಅಪ್ಪಿಕೊಳ್ಳುವಳು.)

ಕುಸುಮಾ: ಅಮ್ಮಾ!

ರಾಮು: ಏನೇ ಇದು, ಹೀಗೆ ಮಗಳ ಮೇಲಿನ ಪ್ರೀತಿಯನ್ನೆಲ್ಲಾ ನೀನು ಒಂದೇ ದಿನ ಪ್ರದರ್ಶಿಸಿದರೆ ಹೇಗೆ? ಹದಿನೈದು ದಿನ ಇರುತ್ತಾಳಲ್ಲ ಹದಿನೈದು ದಿನಗಳಿಗೆ ಸರಿಯಾಗಿ ಹಂಚಿಹಾಕು.

ಸೀತಾಬಾಯಿ: ಸಾಕುಮಾಡಿ ನಿಮ್ಮ ತಮಾಷೆ! ಪ್ರೀತಿಯನ್ನು ಹಂಚಿ ಹಾಕಿದರೆ ನಿಮ್ಮ ಮೇಲೆ ಎಷ್ಟು ಉಳಿದೀತೋ ಎಂದು ಆಲೋಚನೆಮಾಡಿ.

ಮಗೂ, ಒಳಗೆ ಬಾ! (ಅಳಿಯನನ್ನುದ್ದೇಶಿಸಿ) ಒಳಗೆ ಬಾ! ಕಾಲು ತೊಳೆದುಕೊಂಡು, ಕಾಫಿ ಕುಡಿಯಿರಿ. (ಮಗಳು ಮತ್ತು ಅಳಿಯನೊಡನೆ ಒಳಗೆ ಹೋಗುವಳು.)

ರಾಮು: ಅಂತೂ ಅವಳ ಮಗಳು ಬಂದಳು! ಇನ್ನು ನಮ್ಮನ್ನು ಕೇಳುವವರಿಲ್ಲವೆಂದು ತೋರುತ್ತದೆ! (ಅಲ್ಲೇ ಕುಳಿತು ಪೇಪರ್ ಓದಲಾರಂಭಿಸುವರು. ಶೀನಪ್ಪನ ಪ್ರವೇಶ.)

ಶೀನಪ್ಪ: ಸ್ವಾಮಿ.

ರಾಮುರಾಯು: ಯಾರದು? (ಶೀನಪ್ಪನನ್ನು ನೋಡಿ) ನೀನೋ? ಯಾಕೆ ಬಂದೆ? ಏನು ಬೇಕು?

ಶೀನಪ್ಪ: ನೀವಾವಾಗ ಮತ್ತೆ ಬರಹೇಳಿದಿರಿ.

ರಾಮು: ನಿಜ, ಈಗ ಬಂದಿಯಲ್ಲ. ಇನ್ನು ಬಂದ ವಿಷಯ ಹೇಳು.

ಶೀನಪ್ಪ: ಸ್ವಾಮಿ, ಈ ದಿನ ದೀಪಾವಳಿ. ಮನೆಯಲ್ಲಿ ಗಂಜಿಗೂ ಗತಿಯಿಲ್ಲ. ಒಂದು ಹತ್ತು ರೂಪಾಯಿ ಸಾಲಕೊಟ್ಟರೆ ನಿಮ್ಮ ಉಪಕಾರವನ್ನು ಸಾಯೋ ವರೆಗೂ ಮರೆಯಲಾರೆ.

ರಾಮು: ಹತ್ತು ರೂಪಾಯಿ ಬಿಟ್ಟು, ಹತ್ತಾಣೆ ಇದ್ದಿದ್ದರೆ ನಾನಿಂದು ಅರಸು! ಸಾಲ ಕೇಳಬೇಡ! ನಿನ್ನ ಹಿಂದಿನ ಸಾಲವೆಷ್ಟಾಯಿತು ಗೊತ್ತೇ? ನಿನ್ನ ಒಂದು ತಿಂಗಳ ಮೊತ್ತ ದಾಟಿಹೋಗಿದೆ. ಈ ದಿನ ನೀನೇ ಹತ್ತು ರೂಪಾಯಿ ಪಾವತಿ ಮಾಡಿದರೆ ಪರಮ ಸಂತೋಷ.

ಶೀನಪ್ಪ: ಸ್ವಾಮಿ, ತಮಗೆ ಕೊಡಲು ಹತ್ತು ರೂಪಾಯಿಗಳು ನನ್ನೊಡನೆ ಇದ್ದರೆ ನಾನಿಂದು ಸಾಲಕೇಳುವೆನೇ? ಹಣವಿದ್ದರೆ ಈ ಮೊದಲೇ ಸಾಲ ತೀರಿಸಲಾರೆನೇ? ಹಬ್ಬದ ದಿನದಲ್ಲಿ ಉಪವಾಸವಿರಬಾರದೂ ಅಂತ— ಅದರಲ್ಲಿಯೂ ಹೆಂಡತಿ–ಮಕ್ಕಳು ಅಳುಮೋರೆಗಳಿಂದ, ಹಸಿವಿನ ಮುಖಗಳಿಂದ ಇರಲಾಗದು ಅಂತ ಈ ಸಾಲ ಕೇಳುತಿದ್ದೇನೆ. ತುಪ್ಪ-ಸಕ್ಕರೆ-ಹೊಸ ಉಡುಪು– ಈ ಯಾವ ವಿಲಾಸವೂ ಇಲ್ಲ. ಒಂದಿಷ್ಟು ಅಕ್ಕಿ—ಒಂದಿಷ್ಟು ಬೇಳೆ—ಒಂದಿಷ್ಟು ಬೆಲ್ಲ.... —

ರಾಮು: ಅದು ಸರಿ, ಅಲ್ಲವೆನ್ನಲಿಲ್ಲ. ಆದರೆ, ನಾನೆಲ್ಲಿಂದ ಕೊಡಲಿ?

ಶೀನಪ್ಪ: ನೀವು ಧಾರಾಳ ಮನಸ್ಸು ಮಾಡಿದರೆ........

ರಾಮು: ಏ ಶೀನಾ! ನನ್ನ ಮನಸ್ಸು ಸಮುದ್ರದಷ್ಟು ದೊಡ್ಡದು ಆದರೆ, ಆ ಸಮುದ್ರದಲ್ಲಿ ಹತ್ತು ರೂಪಾಯಿಗಳಿಲ್ಲ. ಇರುವುದೆಲ್ಲವು ಕುಡಿಯಲು ಬಾರದಂಥ ನೀರು.

ಶೀನಪ್ಪ: ಐದೇ ರೂಪಾಯಿಗಳನ್ನಾದರೂ ತಾವು ಕೊಟ್ಟರೆ........

ರಾಮು: ಏ ಹುಚ್ಚಾ! ಐದೇ ರೂಪಾಯಿಗಳಿದ್ದರೆ ಅವುಗಳನು ಕೊಡಲು ಬರುವುದೇ? ನೋಡು—ನೀನು ಕಳೆದ ತಿಂಗಳಲ್ಲಿ ಸಾಲ ನ್ನೊಯ್ದ ಅನಂತರ ಒಂದು ತಿಂಗಳು ಹೇಗೂ ದೂಡಿಬಿಟ್ಟೆ. ಈಗ ಒಂದು ದಿನ—ನಾಳೆ ಒಂದು ದಿನ—ಈ ತರದಲ್ಲಿ ಗಟ್ಟಿಮನಸ್ಸುಮಾಡಿ ಸುಮ್ಮಗಿರು ಸಾಲವಿಲ್ಲದೆ ಸೋಲಿಲ್ಲದೆ ಹಾಯಾಗಿ ದಿನಗಳು ಹೋಗುತ್ತವೆ.

ಶೀನಪ್ಪ: ತಾವು ಧಾರಾಳ ಮನಸ್ಸು ಮಾಡಬೇಕೂ ಅಂತ.......

ರಾಮು: ಶ್! ಧಾರಾಳ ಮನಸ್ಸು ಮಾಡಬೇಕಾದವನು ನೀನು ನನ್ನ ಮನಸ್ಸು ಈ ಮೊದಲೇ ಧಾರಾಳವಾಗಿದೆ. ಹೇಳಿದೆನಲ್ಲ—ಸಮುದ್ರ ದಷ್ಟು ವಿಶಾಲ. ಹೋಗು–ಕಾಡಬೇಡ! ನನಗೆ ಬೇರೆ ತುಂಬಾ ಕೆಲಸ ಇದೆ

ಶೀನಪ್ಪ: (ನಿಟ್ಟುಸಿರು ಬಿಡುತ್ತ) ಕ್ಷಮಿಸಿರಿ, ಕೇಳಬಾರದಿತ್ತು. ಆದರೂ ಕೇಳಿದೆ. (ಹೋಗುವನು. ಫರದೆ.)

ದೃಶ್ಯ ೭

(ಬೀದಿ. ಶೀನಪ್ಪನು ಬರುತ್ತಾ)

ಶೀನಪ್ಪ: (ಸ್ವಗತಃ) ರಾಮುರಾಯರೂ ಸಾಲಕೊಡಲು ನಿರಾಕರಿಸಿ ದರು. ಈಗೇನು ಮಾಡಲಿ? ಎಲ್ಲಿಗೆ ಹೋಗಲಿ? ಮನೆಗೆ ಹೋದರೆ ಹೆಂಡ ತಿಯ ಆತುರದ ಮುಖ—ಮಕ್ಕಳ ನಿರಾಶೆಯ ವದನಗಳನ್ನು ನೋಡಲಾರೆ. ನನ್ನನ್ನು ದೇವರು ಏಕೆ ಸೃಷ್ಟಿಸಿದನೋ? ಹೇಗಾದರೂ ಮಗುವಿಗೆ ತಿಂಡಿ ಹಾಗೂ ಅಡಿಗೆ ವಸ್ತುಗಳನ್ನು ಕೊಂಡೊಯ್ಯದೆ ಬಿಡಲಾರೆ. (ವಿಷಾದದ ನಗೆ ನಕ್ಕು) ಎಷ್ಟು ಬೇಗ ನನ್ನ ಪ್ರತಿಜ್ಞೆ! ಕೈಯ್ಯಲ್ಲಿ ಕಾಸಿಲ್ಲದಿದ್ದರೂ ಪ್ರತಿಜ್ಞೆ ಗೈಯ್ಯುವುದರಲ್ಲಿ ನಾನು ಮುಂದು. ಈಗ ನನಗೆ ಇರುವುದು ಅದೊಂದೇ ಉಪಾಯ. ಕದಿಯುವುದು! 'ಕಳ್ಳತನ'ವೆಂದು ನಾನೇಕೆ ಅಂದುಕೊಳ್ಳ ಬೇಕು? ನನಗೆ ಅತೀ ಅವಶ್ಯ ಇದ್ದುದನ್ನು ಹೆಕ್ಕಿಕೊಳ್ಳುವುದು ಎಂದೆನ್ನು

ತ್ತೇನೆ. ಇದಲ್ಲದೆ ಗತಿಯಿಲ್ಲ. (ಪುನಃ ಆಲೋಚಿಸಿ) ದೀಪಾವಳಿಯ ಶುಭದಿನದಲ್ಲೂ ನನ್ನ ಕೈಯಿಂದ ಕದಿಯುವ ಕೆಲಸ ಏಕೆ ಮಾಡಿಸುವಿ ಭಗವಂತ?....ನನ್ನ ಹಣೆಬರಹಕ್ಕಾಗಿ ದೇವರನ್ನೇಕೆ ದೂರುವುದು? ರಾಮರಾಯರ ಮನೆಯಲ್ಲಿ ತುಂಬ ದೇಹ ಸವೆಸಿದ್ದೇನೆ. ಅಲ್ಲಿಂದಲೇ ವಸ್ತ್ರ ಹಾಗೂ ತಿನಸುಗಳನ್ನು ಕದ್ದು ಮನೆಗೆ ಹೋಗುವೆನು. ಇದರಲ್ಲಿ ದೋಷವೇನು? ಅಥವಾ ದೋಷವಿದ್ದರೂ ಇರಲಿ. ಈ ಜನ್ಮವೇ ದೋಷಪೂರಿತವಾಗಿದೆ. (ಹೋಗುವನು. ಪರದೆ.)

ದೃಶ್ಯ ೭

(ಶೀನಪ್ಪನ ಮನೆ. ಶೀನಪ್ಪನ ಪತ್ನಿ, ತನ್ನ ಪತಿ ಬಾರದಿರುವುದನ್ನು ಕಂಡು ಗಾಬರಿಯಾಗಿದ್ದಾಳೆ.)

ಲಕ್ಷ್ಮಿ: (ಸ್ವಗತಃ) ಇವರೆಲ್ಲಿ ಹೋದರೋ? ಹೋಗಿ ಎರಡು ಗಂಟೆಗಳಾದರೂ ಕಾಣುವುದಿಲ್ಲವಲ್ಲ. ಸಾಲ ಸಿಕ್ಕಿತೋ ಇಲ್ಲವೋ? ಗುರುವನೆಲ್ಲಿ ಹೋದ? ಗುರುವಾ, ಲೋ ಗುರುವಾ!

ಗುರುವ: (ಹೊರಗಿನಿಂದ) ಏನಮ್ಮ?

ಲಕ್ಷ್ಮಿ: ಅಲ್ಲೇನು ಮಾಡುತ್ತಿರುವೆ ಮಗೂ? ಇಲ್ಲಿ ಬಾ!

ಗುರುವ: (ಪ್ರವೇಶಿಸಿ) ಏನು ಬೇಕಮ್ಮ?

ಲಕ್ಷ್ಮಿ: ನಿನ್ನ ತಂದೆಯವರು ಹೊರಹೋದವರು ಇನ್ನೂ ಬಂದಿಲ್ಲ. ಆ ರಾಮರಾಯರ ಮನೆಗೆ ಹೋಗಿ ಅಲ್ಲಿದ್ದಾರೋ ಎಂದು ನೋಡು. ಇದ್ದರೆ ಬೇಗ ಬರಲು ಹೇಳು.

ಗುರುವ: ಆಯ್ತಮ್ಮ. ಅಮ್ಮಾ, ಅಪ್ಪ ತಿಂಡಿ ತರುವರೇ? ಆಚೆ ಮನೆ ಹುಡುಗರಿಗೆ ಅವರ ತಂದೆ ತಿಂಡಿ, ವಸ್ತ್ರ ಪಟಾಕಿ ಎಲ್ಲ ತಂದಿದ್ದಾರಮ್ಮ. ನನಗೂ ಅಪ್ಪ ತರುವರಲ್ಲವೇ? ಹೇಳಮ್ಮ.

ಲಕ್ಷ್ಮಿ: (ವೇದನೆ ತುಂಬಿದ ಧ್ವನಿಯಿಂದ) ತರುವರು ಮಗೂ.

ಗುರುವ: (ಸಂತೋಷದಿಂದ) ಹಾಗಾದರೆ, ನಾನು ಬೇಗ ಅಪ್ಪನನ್ನು ಕರೆತರುವೆನಮ್ಮಾ. (ನಲಿಯುತ್ತಾ ಹೋಗುವನು.)

ಲಕ್ಷ್ಮಿ: ಅಯ್ಯೋ, ಮಗುವಿನೊಡನೆಯೂ ಸುಳ್ಳು ಹೇಳಬೇಕಾಯಿತಲ್ಲ! ಈಗ ಇವರು ಬರಿ ಕೈಯಲ್ಲಿ ಬಂದರೆ ಅವನ ದುಃಖವನ್ನು ಹೇಗೆ

ಸಹಿಸುವುದು? ಆದರೆ, ಇವರಿನ್ನೂ ಬಂದಿಲ್ಲವಲ್ಲ. ನನ್ನ ಮನಸ್ಸಿಗೇನೋ ಒಂದು ತರದ ಕಳವಳ ಉಂಟಾಗಿದೆ. ಅವರ ಮುಖ ನೋಡುವ ವರ ನನ್ನ ಎದೆಯು ತಳಮಳ ಶಾಂತವಾಗುವಂತಿಲ್ಲ. ನಾನೇ ಅಲ್ಲಿಗೆ ಹೋ ನೋಡಿ ಬರುವೆನು.

ಫರದೆ.

ದೃಶ್ಯ ೮

(ರಾಮರಾಯರ ಮನೆ. ಹಜಾರದಲ್ಲಾರೂ ಇಲ್ಲ. ಶೀನಪ್ಪನು ಒಂ ವಸ್ತ್ರಗಳ ಗಂಟನೊಂದಿಗೆ ಮೆಲ್ಲನೆ ಪ್ರವೇಶಿಸುವನು.)

ಶೀನಪ್ಪ: (ಸ್ವಗತಃ) ವಸ್ತ್ರಗಳನ್ನು ಹೇಗೂ ಎಬ್ಬಿಸಿಬಿಟ್ಟೆ. ಇನ ತಿಂಡಿಗಳನ್ನೊಯ್ಯಬೇಕು. ಎಲ್ಲರೂ ತೋಟಕ್ಕೆ ಹೋದಂತೆ ತೋರುತ್ತ ಇದೇ ತಕ್ಕ ಸಂದರ್ಭ. ಅಡಿಗೆಮನೆಯಿಂದ ತಿಂಡಿಗಳ ಹರಿವಾಳ ಬರುತ್ತಿ (ಅಡಿಗೆಮನೆಯತ್ತ ಹೋಗುವನು) ಆಹಹ! ಎಷ್ಟು ತರದ ತಿಂಡಿಗಳ ಸಾಧ್ಯವಾದಷ್ಟು ನನ್ನ ಮುಂಡಾಸಿನ ವಸ್ತ್ರದಲ್ಲಿ ಕಟ್ಟಿಕೊಳ್ಳುವೆನು. (ಮುಂಡಾ ಸನ್ನು ಬಿಚ್ಚಿ ಅದರ ವಸ್ತ್ರದಲ್ಲಿ ತಿಂಡಿಗಳನ್ನು ತುಂಬಲಾರಂಭಿಸುವನ ಸ್ವಲ್ಪ ತುಂಬಿಸುವಷ್ಟರಲ್ಲಿ ಯಾರೋ ಬಂದ ಶಬ್ದವಾಗುವುದು.) ಯಾರೊ ಬಂದಂತಿದೆ. ಇಲ್ಲೇ ಕಪಾಟಿದೆ. ಇದರ ಹಿಂದೆ ಮರೆಯಾಗುವೆನು. (ಅಲ್ಲಿ ಇದ್ದ ಒಂದು ಕಪಾಟಿನ ಮರೆಯಲ್ಲಿ ನಿಲ್ಲುವನು. ಮಾಧುವಿನ ಪ್ರವೇಶ

ಮಾಧು: (ಸ್ವಗತ) ಅಮ್ಮ ಹಿತ್ತಲಿಗೆ ಹೋಗಿದ್ದಾಳೆ. ಇಲ್ಲಿ ತರತರ ತಿಂಡಿಗಳಿವೆ. ಈಗಲೇ ತಿನ್ನಲು ಸುಸಂದರ್ಭ. (ತಿಂಡಿಗಳ ಹರಿವಾ ಗಳನ್ನು ನೋಡಿ) ಅಯ್ಯೊ! ಅಷ್ಟು ಹೆಚ್ಚು ತಿಂಡಿಗಳಿದ್ದ ಈ ಹರಿವಾಣಗಳ ತಕ್ಕಮಟ್ಟಿಗೆ ಖಾಲಿಯಾಗಿವೆಯಲ್ಲಾ! ಇದಾರು, ತಿಂಡಿಗಳನ್ನು ಬರಿದ ಮಾಡಿದವರು? ಅಮ್ಮನನ್ನು ಈಗಲೇ ಕರೆದು ಹೇಳುವುದುತ್ತಮ. ಇ ದಿದ್ದಲ್ಲಿ ನನ್ನ ಮೇಲೆ ಸಂದೇಹಪಟ್ಟಾಳು! ಅಮ್ಮನನ್ನು ಈಗಲೇ ಕರೆತರ ವೆನು. (ಮಾಧುವು ಹೋಗುವನು. ಶೀನಪ್ಪನು ಮೆಲ್ಲನೆ ಕಪಾಟಿನ ಮ ಯಿಂದ ಹೊರಬರುವನು.)

ಶೀನಪ್ಪ: (ಸ್ವಗತ) ಈಗಲೇ ಜಾರಿಬಿಡುವುದೊಳ್ಳೆಯದು. ಇತ ಸಾಮಾನುಗಳ ಆಶೆಬಿಡುವೆನು. ಸಿಕ್ಕಿದ ತಿಂಡಿ ಮತ್ತು ವಸ್ತ್ರಗಳೇ ಲಾಭ ಹೆಚ್ಚಿನ ಆಶೆಗೆ ಹೋದರೆ ಸಿಕ್ಕಿಬೀಳಬೇಕಾದೀತು! (ಹೊರಗೆ ಹೋಗಲ

ತಯಾರಾಗುವಾಗ ರಾಮರಾಯರು ಪತ್ನಿಯೊಡನೆ ಬರುವರು. ರಾಯರನ್ನು ಕಂಡ ಶೀನಪ್ಪನು ಬೆಚ್ಚಿಬೀಳುವನು. ಕೈಯಿಂದ ವಸ್ತ್ರಗಳ ಗಂಟು ಕೆಳಗೆ ಬೀಳುವುದು. ರಾಯರು ಅವನನ್ನು ತಡೆದು,)

ರಾಮರಾಯ: ಯಾರ? ಶೀನ? ಏನಿದು ಅಡಿಗೆಕೋಣೆಗೆ ಪ್ರವೇಶ? ನಿನಗಿಲ್ಲೇನು ಕೆಲಸ? ಅದೇನು ಕೆಳಗೆ ಬಿದ್ದ ಗಂಟು? (ಎತ್ತಿನೋಡಿ) ಕಳ್ಳ, ಸಿಲ್ಲು! ಇನ್ನೇನಿದೆ ನಿನ್ನೊಡನೆ? ಬೇಗ ಹೇಳು. (ಶೀನಪ್ಪನು ನಡುಗುತ್ತಾ ತಿಂಡಿಯ ಗಂಟನ್ನು ರಾಮರಾಯರ ಕೈಗೆ ಕೊಡುವನು. ರಾಮರಾಯರು ಅದನ್ನು ಬಿಚ್ಚಿ, ಒಳಗಿದ್ದ ತಿಂಡಿಗಳನ್ನು ನೋಡಿ, ಸಿಟ್ಟಿನಿಂದ ಉರಿದು ಬೀಳುವರು.)

ರಾಮ: ಅಧಮ! ವಸ್ತ್ರಗಳನ್ನೂ ತಿಂಡಿಗಳನ್ನೂ ಕದ್ದಿರುವೆ! ಈ ಮೊದಲೂ ಈ ರೀತಿ ಆಗಾಗ್ಗೆ ಇಂಥ ವಸ್ತುಗಳು ಕಾಣೆಯಾಗುತ್ತಿದ್ದುವು. ನಿನ್ನ ನಿಜಸ್ವರೂಪವಿಂದು ಬಯಲಾಯಿತು! ನಿನ್ನನ್ನು ಸುಮ್ಮನೆ ಬಿಡುವೆನೆ? ಗಣಪತಿ, ಮಾಧೂ. ಇಲ್ಲಿ ಬನ್ನಿ. ಇವನನ್ನು ಕಟ್ಟಿಹಾಕಿರಿ. ನಾನು ಪೋಲೀಸಿಗೆ ಫೋನುಮಾಡುವೆ.

ಶೀನಪ್ಪ: ರಾಯರೇ, ದಯೆಯಿಡಿರಿ! ಬಡವನಿಗೆ ಕಾರಾಗ್ರಹ ತೋರಿಸದಿರಿ. ನನ್ನನ್ನು ಬಿಟ್ಟುಬಿಡಿರಿ. ನಿಮ್ಮ ತಿಂಡಿ, ವಸ್ತ್ರ ಯಾವುದೂ ನನಗೆ ಬೇಕಿಲ್ಲ. ನನಗೂ ಹೆಂಡತಿ ಮಕ್ಕಳಿದ್ದಾರೆ, ಅವರ ಹಸಿವಿನ ಗೋಳನ್ನು ಕೇಳಲಾಗದೆ ಹೀಗೆ ಮಾಡಿದೆ. ತಪ್ಪಾಯಿತು. ಕ್ಷಮಿಸಿರಿ. ನಾನು ಜೈಲಿಗೆ ಹೋದರೆ ಅವರ ಗತಿಯೇನೆಂತ ಊಹಿಸಿರಿ. ದೀಪಾವಳಿಯ ಈ ಪುಣ್ಯದಿನದಂದು ಒಬ್ಬ ಬಡವನನ್ನು ಜೈಲಿಗೆ ಕಳಿಸಿದ ಪಾಪವನ್ನು ಕಟ್ಟಿಕೊಳ್ಳಬೇಡಿರಿ. ನಿಮ್ಮ ದಮ್ಮಯ್ಯ.

ರಾಮ: (ನಿಷ್ಠೂರವಾಗಿ) ದೀಪಾವಳೀ, ದೀಪಾವಳಿ ಎಂದು ಏಕೆ ಭಾಷಣಮಾಡುವೆ? ದೀಪಾವಳಿಯಂದು ನಿನ್ನ ಪಾಪಾವಳಿಯೂ ದೀರ್ಘವೇ ಆಗಿದೆ. ನೀನು ಏನು ಹೇಳಿದರೂ ಇನ್ನು ನಾನು ಕೇಳಲಾರೆ! ನಿನಗೆ ಜೈಲಿಗೆ ಹೋಗದೆ ಬುದ್ಧಿ ಬರುವಂತಿಲ್ಲ. ಒಮ್ಮೆ ಜೈಲಿನ ರುಚಿ ನೋಡು. ಅಲ್ಲಿ ನೀನು ಹತ್ತು ರೂಪಾಯಿ ಸಾಲ ಕೇಳುವ ಆವಶ್ಯಕತೆಯಿಲ್ಲ. ಸುಖವಾಗಿ, ಕಾಸು ಖರ್ಚಿಲ್ಲದೆ ದೀಪಾವಳಿಯನ್ನಾಚರಿಸಬಹುದು. (ಫೋನನ್ನು ಎತ್ತಿ ಹಿಡಿದು) 'ಹಲ್ಲೋ, ಯಾರಲ್ಲಿ? ನಾನು, ರಾಮರಾಯ ಮಾತಾಡೋದು.

ಪೋಲೀಸ್ ಇನ್‌ಸ್ಪೆಕ್ಟರ್, ನಮ್ಮ ಮನೆಗೊಬ್ಬ ಕಳ್ಳ ನುಗ್ಗಿದ್ದಾನೆ; ಸಿಕ್ಕಿ ಬಿದ್ದಿದ್ದಾನೆ. ಬೇಗ ಬರುವುದು ಅವಶ್ಯವಿದೆ. ಹ್ಞಾ? ಸರಿ—ಕಟ್ಟಿ ಹಾಕಿ ದ್ದೇವೆ. ಹ್ಞಾ? ಏನು? ಅಹುದು, ಅಹುದು. ಕದ್ದುದೆಲ್ಲವೂ ಇಲ್ಲೇ ಇದೆ!

ಶೀನ: (ಅಳುತ್ತ) ರಾಯರೇ, ದಯೆದೋರಿರಿ! ಈ ಮೊದಲು ನಾನ ನಿಮ್ಮ ಮನೆಯಿಂದ ಚಿಕ್ಕಾಸಿನ ಒಡವೆಯನ್ನೂ ಕದ್ದವನಲ್ಲ. ಈ ದಿನ ಏಕೋ ಈ ದುರ್ಬುದ್ಧಿ ಉಂಟಾಯಿತು!

ರಾಮು: ಚಿಂತೆಯಿಲ್ಲ. ಇನ್ನು ಸದ್ಬುದ್ಧಿ ಬರುವುದು.

ಶೀನ: ಖಂಡಿತವಾಗಿಯೂ ಇನ್ನು ಹಾಗೆ ಮಾಡಲಾರೆ! ಹೊಟ್ಟೆಗಿಲ್ಲ ದಿದ್ದರೆ ನೀರು ಕುಡಿದು ಇರುತ್ತೇನೆ—ಅಥವಾ ಸಾಯುತ್ತೇನೆ.

ರಾಮು: ಛೀ ಛೀ! ಸಾಯುವುದು ಮಹಾಪಾಪ! ಸಾಯಬೇಡ. ಸತ್ತನಂತರ ಕದಿಯುವುದೆಲ್ಲಿ?

ಶೀನ: ನಿಮ್ಮ ದಮ್ಮಯ್ಯ, ನನ್ನನ್ನು ಬಿಟ್ಟುಬಿಡಿ. ತಿರುಪೆಯೆತ್ತಿ ಯಾದರೂ ಜೀವಿಸಿಕೊಂಡಿರುತ್ತೇನೆ. ಮೊದಲೇ ನನ್ನ ಹೆಂಡಿರುಮಕ್ಕಳಿಗೆ ಹೊಟ್ಟೆಗೆ ಪೂರ್ತಿ ಅನ್ನ ಇರಲಿಲ್ಲ. ಇನ್ನು ನಾನು ಕಾರಾಗ್ರಹಕ್ಕೆ ಹೋದರೆ ಅವರ ಗತಿಯೇನು? ಆಲೋಚಿಸಿರಿ.

ರಾಮು: ಈ ವಿವೇಕ ನಿನಗೆ ಈ ಮೊದಲೇ ಬಂದಿದ್ದರೆ! ನೀಚ! ನಮ್ಮ ಮನೆ ಅನ್ನ ಉಂಡು, ಕ್ರಮ ಪ್ರಕಾರ ಸಂಬಳ ತೆಗೆದುಕೊಂಡು, ಆ ಮೇಲೆ ಸಾಲವನ್ನೂ ಪಡಕೊಂಡು—ಈ ದಿನದಲ್ಲಿ ಕಳ್ಳತನವನ್ನೂ ಮಾಡಿದೆ! ನಿನ್ನಂಥವರನ್ನು ನಂಬಿ, ಹೇಗೆ ಕೆಲಸಕ್ಕೆ ಹಚ್ಚಿಕೊಂಡು, ವಿಶ್ವಾಸದಿಂದ ಒಂದರೆ ನಿಮಿಷ ಹೊರಗೆ ಹೋಗಲಿ? ಉಂಡ ಮನೆಗೆರಡೆಣಿಸುವ ಅಧಮ!

(ಕುಸುಮ, ಗಾಬರಿಯಿಂದ ಪ್ರವೇಶಿಸುವಳು.)

ಕುಸುಮ: ಅಪ್ಪಾ, ನನ್ನ ಎರಡು ರೇಶ್ಮೆ ಸೀರೆಗಳು, ಮೂರು ರವಕೆಗಳು ಕಾಣೆಯಾಗಿವೆ.

ರಾಮು: ಹೌದೇ! ಇವನು ನಿನ್ನ ಬಟ್ಟೆಗಳನ್ನೂ ಕದ್ದಿರುವನೇ? ಇನ್ನೇನೇನೆಲ್ಲಾ ವಸ್ತ್ರ ಕದ್ದಿರುವನೆಂದು ನೋಡುವಾ. (ಗಂಟನ್ನು ಬಿಚ್ಚಿ) ಒಂದೊಂದಾಗಿ ತೆಗೆದುನೋಡುವನು.)

ಗಣಪತಿ: (ಆಶ್ಚರ್ಯದಿಂದ) ಮಾವಾ, ನನ್ನ ಎರಡು ಸೂಟು, ಎರಡು ಧೋತಿ ಹಾಗೂ ಒಂದೆರಡು ಶರ್ಟುಗಳೂ ಅದರಲ್ಲಿವೆ.

ರಾಮ: ಶೀನ, ನಿನ್ನ ಅಪರಾಧ ಘೋರವಾಗಿದೆ. ಇದೇ ದಿನ ಮನೆಗೆ ಬಂದವರ ಬಟ್ಟೆಗಳನ್ನೂ ಕದ್ದಿರುವೆ. ನಿನ್ನನ್ನು ಸುಮ್ಮನೆ ಬಿಡಲಾರೆ! ಸುಮ್ಮನೆ ನಿನ್ನನ್ನು ಬಿಟ್ಟು ಬಿಟ್ಟರೆ ನನಗೆ ಪಾಪ ಬಂದೀತು.

ಶೀನ: ನನ್ನ ದೇವರೇ! ದೀಪಾವಳಿಯಂದು, ಒಂದು ಹಣತೆ ಉರಿಸಲೂ ಹಣವಿಲ್ಲದೆ, ದಿಕ್ಕು ತೋಚದೆ ಈ ಪಾಪ ಘಟಿಸಿ ಹೋಯಿತು!

ರಾಮ: ಮುಚ್ಚು ಬಾಯಿ! ತಾನಾಗಿ ಮನಸ್ಸು ಮಾಡಿ ಯತ್ನ ಪೂರ್ವಕವಾಗಿ ಕದ್ದು, ಈಗ ಘಟಿಸಿ ಹೋಯಿತಂತೆ!—ಅಕೋ, ಇನ್‌ಸ್ಪೆಕ್ಟರರು ಬಂದರು! ಅವರೊಡನೆ ಹೇಳು ನಿನ್ನ ಕಥೆಯನ್ನು!

(ಇನ್‌ಸ್ಪೆಕ್ಟರರು ಒಬ್ಬ ಕೊನ್‌ಸ್ಟೇಬಲನೊಡನೆ ಬರುವರು.)

ರಾಮ: ಇನ್‌ಸ್ಪೆಕ್ಟರ್! ಇವನೇ ಆ ಕಳ್ಳ! (ಶೀನನಿಗೆ) ಹೇಳು ನಿನ್ನ ಕಥೆ!

ಇನ್ಸ್: ರಾಮರಾವ್! ಎಂಥ ಕಳವು ಇದು?

ರಾಮ: ಅವನನ್ನೇ ವಿಚಾರಿಸಿರಿ.

ಇನ್ಸ್: ಹೇಯತ್! ಇಲ್ಲಿ ನೋಡು! ಏನು ಕದ್ದೆ?

ಶೀನ: ಸ್ವಾಮೀ, ನಿಮ್ಮ ದಮ್ಮಯ್ಯ! ನಾನು ಇದೇ ಮನೆಯಲ್ಲಿ ಇರುವ ಆಳು! ಈ ತುಂಡು ವಸ್ತ್ರಗಳು ನಾಲ್ಕು—ಇಷ್ಟೊಂದು ತಿಂಡಿ....!

ಇನ್ಸ್: ಕದ್ದೆಯಾ?

ಶೀನ: ಅಂದರೆ................ನಿಮಗೆ ನಿಜವಾಗಿ ಹೇಳುತ್ತೇನೆ! ನನ್ನ ಹೆಂಡತಿ ಮಕ್ಕಳು ಉಪವಾಸ ಇದ್ದಾರೆ. ನಾನು ಒಂದು ಐದು ರೂಪಾಯಿ ಸಾಲ ಕೊಡಿರೆಂದು............

ರಾಮ: ಹತ್ತು ರೂಪಾಯಿ! ಸರಿಯಾಗಿ ಹೇಳು!

ಶೀನ: ಹತ್ತು ರೂಪಾಯಿ ಸಾಲವನ್ನು ಮೊದಲು, ಆ ಮೇಲೆ ಐದು ರೂಪಾಯಿಯನ್ನೂ ಕೇಳಿದೆ.

ಇನ್ಸ್: ಒಟ್ಟಗೆ ಹದಿನೈದು ರೂಪಾಯಿ?

ಶೀನ: ಅಲ್ಲ – ಐದೇ ರೂಪಾಯಿ. ಹತ್ತು ರೂಪಾಯಿ ಕೊಡಲಾಗದಿದ್ದರೆ, ಐದುರೂಪಾಯಿಗಳನ್ನಾದರೂ ಕೊಡಿರೆಂದು ಬೇಡಿದೆ.

ರಾಮ: ಕಾಡಿದೆ!—ಸರಿಯಾಗಿ ಹೇಳು.

ಇನ್ಸ್: ಅವರು ಕೊಟ್ಟರೇ?

ಶೀನ: ನಾನೇ ಅವರಿಗೆ, ಈ ಮೊದಲಿನ ಸಾಲದಲ್ಲಿ ಹತ್ತು ರೂಪಾಯಿ ಪಾವತಿಮಾಡಬೇಕೆಂದರು.

ಇನ್ಸ್: ಸರಿ. ಅದಕ್ಕಾಗಿ ಕೋಪದಿಂದ ಇದನ್ನು ಕದ್ದೆ—ಅಲ್ಲವೇ?

ಶೀನ: ಕೋಪದಿಂದ ಅಲ್ಲ ಸ್ವಾಮಿ, ಹೊಟ್ಟೆಯ ತಾಪದಿಂದ!

ರಾಮ: ಪಾಪ!

ಶೀನ: ಆದರೆ, ಕೊಂಡುಹೋಗಿಲ್ಲ. ಇಲ್ಲೇ ಇವೆ ಸೊತ್ತುಗಳು! ತೆಗೆದುಕೊಂಡು, ನನ್ನನ್ನು ಬಿಟ್ಟುಬಿಡಿರಿ.

ರಾಮ: ನಾನು ಅದೇ ಆಲೋಚನೆಯಲ್ಲಿದ್ದೇನೆ. ಆದರೆ, ನಿನ್ನಂಥ ಪುಣ್ಯಾತ್ಮನನ್ನು ಹೀಗೇ ನಾಯಿಮರಿಯನ್ನು ಬಿಟ್ಟುಬಿಟ್ಟಂತೆ ಹೋಗಗೊಡಲಾಗುವುದೇ? ಸರಪಣಿಗಳಿಂದ ಅಲಂಕರಿಸಿ ಒಯ್ದು, ಮತ್ತೆ ಭೂಷಿಸಿ, ಕೆಲವು ದಿನಗಳ ಆತಿಥ್ಯ ಕೊಟ್ಟೇ ಬಿಡದಿದ್ದರೆ ನಮಗೇ ಪಾಪ ತಟ್ಟೀತು! ಕೊನ್ಸ್‌ಟೇಬಲ್! ಇವನ ಕೈಗೆ ಕೋಳ ತೊಡಿಸು. ನಡಿಯಿರಿ.

(ಶೀನಪ್ಪನು, "ದಮ್ಮಯ್ಯ ಬಿಡಿ!" ಎಂದು ಪ್ರಲಾಪಿಸುತ್ತಿದ್ದಂತೆ ಕೈಗೆ ಕೋಳ ತೊಡಿಸುವರು. ಆಗಲೇ ಲಕ್ಷ್ಮಿ ಮತ್ತು ಗುರುವಿನ ಪ್ರವೇಶ.)

ಗುರುವ: ಅಮ್ಮಾ, ಅಪ್ಪನ ಕೈಗೆ ಏನು ಕಟ್ಟಿದ್ದಾರೆ?

ಲಕ್ಷ್ಮಿ: ಹಾಯ್ ಭಗವಂತ! ಏನಿದು ಅನರ್ಥ?

ಇನ್ಸ್: ಯಾರು ನೀನು?

ಲಕ್ಷ್ಮಿ: ನನ್ನ ಪತಿಯು ಮಾಡಿದ ಅಪರಾಧವೇನು?

ಇನ್ಸ್: ಓಹೋ! ಇವನು ನಿನ್ನ ಗಂಡನೇ? ಒಳ್ಳೇ ಗಂಡನಮ್ಮಾ ನಿನ್ನವ! ದೀಪಾವಳಿಯ ಉಡುಗೊರೆಯನ್ನು ಎತ್ತಿಕೊಂಡ! ಅದಕ್ಕಾಗಿ, ಅವನನ್ನು ಪುರಸ್ಕರಿಸಲು ಒಯ್ಯುತ್ತಿದ್ದೇವೆ!

ಲಕ್ಷ್ಮಿ: ಹಾಗೇಕೆ ಮಾತಾಡುವಿರಿ?

ಇನ್ಸ್: ನಿನ್ನ ಗಂಡನ ಭಾಷೆಯಲ್ಲಿ ಅವನು 'ಉಡುಗೊರೆ'ಯನ್ನೆತ್ತಿಕೊಂಡನು. ನಮ್ಮ ಭಾಷೆಯಲ್ಲಿ ಅದಕ್ಕೆ ಕಳವು ಎನ್ನುತ್ತಾರೆ.

ಲಕ್ಷ್ಮಿ: (ತನ್ನ ಗಂಡನೊಡನೆ) ಏನಿದು ಸ್ವಾಮೀ? ಏನು ಮಾಡಿದಿರಿ ನೀವು? ಹೀಗೇಕೆ ಮಾಡಿದಿರಿ?

ರಾಮರಾಯ: ಅವನ ಅಭ್ಯಾಸದ ಒಂದು ಆಟವನ್ನಾಡಿದನು, ಅಷ್ಟೆ.

ಲಕ್ಷ್ಮಿ: (ಮನೆ ಯಜಮಾನನಿಗೆ) ಸ್ವಾಮೀ, ಹಾಗೆ ಮಾತಾಡಬೇಡಿರಿ. ಒಂದು ಮನೆಯ ದೀಪವನ್ನಾರಿಸಿ, ಇನ್ನೊಂದು ಮನೆಯಲ್ಲಿ ದೀಪವುರಿಸಿ ದೀಪಾವಳಿ ಆಚರಿಸುವರೇ? ಅವರನ್ನು ಬಿಟ್ಟುಬಿಡಿರಿ!

ಇನ್ಸ್: ಕಾನ್ಸ್ಟೇಬಲ್! ನಡೆ ಹೋಗೋಣ!

(ಕಾನ್ಸ್ಟೇಬಲನು ಶೀನನನ್ನು ಎಳೆದೊಯ್ಯುವನು. ಲಕ್ಷ್ಮಿಯು ಆರ್ತನಾದಮಾಡಿ ಬೀಳುವಳು. ಅವಳ ಮಗನು ಅವಳನ್ನೆಬ್ಬಿಸಲು ಯತ್ನಿಸುವನು. ರಾಮರಾಯರು ಮೀಸೆ ಉಜ್ಜುತ್ತ ನಿಲ್ಲುವರು.)

(ಪರದೆ)

— ಸಂಪೂರ್ಣ —

Edited, Printed & Published by K. V. Shenoy
at The Prabhat Printers, Ltd., Mangalore.